

# ಶ್ರೀರಾಮಕೃಷ್ಣ ಮಹಿಮಾ

ಮೂಲ ಬಂಗಾಳಿ : ಅಕ್ಷಯಕುಮಾರ್ ಸೇನ್

## ಜೈ ಗುರುದೇವ

## ಅಧ್ಯಾಯ ೪ – ರಘುವೀರನ ಮಾಲೆ

೩೯೬. ಧ್ಯಾನದಲಿ ಲೀನನಾಗಿಹ ತಂದೆಯನ್ನು ।
ತಾನತಿವಿನೋದದಲಿ ಕರೆದು ಪೇಳಿದನು ॥

೩೯೭. ಕಣ್ತೆರೆದು ನೋಡು ರಘುವೀರ ಹೇಗಿಹನು ।
ಗಂಧಮಾಲೆಗಳಿಂದ ಶೋಭಿಸುತ್ತಿಹನು ॥

೩೯೮. ಸಾಲಿಗ್ರಾಮದ ಶಿಲೆಯೊಳಿಲ್ಲ ರಘುವೀರ।
ನಾನೆ ನೋಡೆಂದು ತಂದೆಯ ಕರೆದು ಪೇಳ್ದ॥

೩೯೯. ಖುದಿರಾಮನರಿಯನೇ ಮಗನ ಮಹಿಮೆಯನು।
ಇವ ಕಂಡು ಬೆರಗಾಗಿ ಮೌನ ತಾಳಿದನು॥

೪೦೦. ರಘುವೀರನಾ ನೆಲೆಯಯೋಧ್ಯೆಯಂದದಲಿ।
ಕಾಮಾರಪುಕುರ ಶೋಭಿಸಿತು ಧರೆಯಲ್ಲಿ॥

೪೦೧. ಗುರುದೇವನಾ ಬಾಲಲೀಲೆಗಳ ತಾಣ।
ಕಾಣುವಾ ಕಂಗಳಿಗೆ ಪೀಯೂಷ ಪಾನ॥

೪೦೨. ಅಲ್ಲಿರುವ ನರನಾರಿಯರು ಪುಣ್ಯಯುತರು।
ಗಿರಿ ಕಲ್ಲುಗಳು ಕೂಡ ಮನವ ಸೆಳೆಯುವವು॥

೪೦೩. ಪಶುಪಕ್ಷಿಗಳು ಸಹಿತ ಸ್ತುತಿ ಮಾಡುತಿಹವು ।
ತರುಲತೆಗಳೆಲ್ಲವೂ ವಂದ್ಯವೆನಿಸುವವು॥

೪೦೪. ಗುರುದೇವನಾ ಮಹಿಮೆ ಬಣ್ಣಿಸಲಿಕಸದಳ।
ಹುಲುಮಾನವರ ನಡುವೆಯೂ ನಾನು ದುರ್ಬಲ॥

೪೦೫. ಸತ್ಕೀರ್ತಿ ಶುಭಗುಣವನೆಂತು ಬಣ್ಣಿಸುವೆ।
ಯತ್ಕಿಂಚಿತಾದರೂ ಅರಿವು ಎನಗಿಹುದೆ॥

೪೦೬. ನಿನ್ನ ಕರುಣಾದೃಷ್ಟಿ ಎನ್ನ ಮೇಲಿರಲಿ।
ಎನ್ನ ಮನಕದು ಬೋಧೆಯಾಗಿಯೇ ಸಲಲಿ॥

೪೦೭. ಆ ನಿರೀಕ್ಷೆಯೊಳಿರುವೆನ್ನೈ ನಂಬಿ ನಾನು।
ನೀನನುಗ್ರಹತೋರು ಕೈಯ ಮುಗಿಯುವೆನು॥

೪೦೮. ಕಾಮಾರಪುಕುರದಾ ಸುತ್ತಲಿಹ ಜನರು।
ಆ ಗದಾಯಿಯನು ಮಗನಂತೆ ಕಾಣುವರು॥

೪೦೯. ಅವನ ಸುಮಧುರ ವಾಣಿ ಕೇಳಿ
ನಲಿಯುವರು।
ಶಿವಶ್ಯಾಮರಾ ಭಜನೆ ಹೇಳು ಎನ್ನುವರು॥

೪೧೦. ಇಂಪಾದ ಕಂಠದಲಿ ಅವ ಹಾಡುತ್ತಿದ್ದ।
ಆ ಹಾಡು ಕೇಳ್ದವರ್ಗೆಲ್ಲ ಆನಂದ॥

೪೧೧. ಊರಿನಾ ನಾರಿಯರು ಹತ್ತಿರಕೆ ಕರೆದು।
ಸಿಹಿತಿಂಡಿಗಳನಿತ್ತು ಹಾಡು ಎನ್ನುವರು॥

೪೧೨. ವಿಧವೆಯರು ತಮತಮಗೆ ದೊರೆತುದನ್ನೆಲ್ಲ।
ಕಾದಿರಿಸಿ ಜತನದಲಿ ಬರನೋಳ್ಪರಲ್ಲ॥

೪೧೩. ಅಂಗಳದೊಳಿರಲಿ ಹೊಲ ಬೀದಿಗಳೊಳಿರಲಿ।
ಕಂಡರೆ ಗದಾಯಿಯನು ಕರೆದೊಯ್ವರಲ್ಲಿ ॥

೪೧೪. ನೆಯ್ದು ನೂಲನು ಮಾರಿ ಬಂದ ಹಣದಿಂದ।
ಬಗೆಬಗೆಯ ಸಿಹಿತಿನಿಸ ಕೊಂಡುಬಹರೆಲ್ಲ॥

೪೧೫. ಆ ಗದಾಧರನಿಂಗೆ ನೀಡಿ ನಲಿಯುವರು।
ಕಾಣಸಿಗದಿರೆ ಮನದಿ ಕಾತರದೊಳಿಹರು॥

೪೧೬. ಒಂದೆರಡು ದಿನವಾತ ಕಾಣಸಿಗದಿರಲು।
ಬಂದಿಪರು ಬ್ರಾಹ್ಮಣನ ಮನೆಗೆ ತವಕದೊಳು॥

೪೧೭. ಆ ಜಾತಿ ಈ ಜಾತಿ ಎನುವ ಕೊಸರಿಲ್ಲ।
ಎಲ್ಲರು ಗದಾಯಿಯನೆ ನೆಚ್ಚಿರ್ದರಲ್ಲ॥

೪೧೮. ಆ ಊರ ಸ್ತ್ರೀಪುರುಷರತಿ ಸುಯೋಗಿಗಳು।
ಪೂರ್ವದೊಳಗವರ್ಯಾರೊ ಊಹಿಸುವುದೆಂತು॥

೪೧೯. ಕಂಗಳೆರಡಿದ್ದರೂ ಗುರುತು ಸಿಗದಲ್ಲ।
ಕುರುಡನಂತಾದೆ ನಾನೀಗ ಸುಳ್ಳಲ್ಲ॥

೪೨೦. ದಯೆದೋರಿ ಕಣ್ದೆರೆಸು ಓ ಜಗದ್ಗುರುವೆ।
ಭಯಭಕ್ತಿಯಿಂದ ನಿನ್ನೊಳು ಬೇಡುತಿರುವೆ॥

೪೨೧. ಗುರುದೇವ ತವಪಾದ ದರ್ಶನದಿ ನಾನು।
ಜೀವನವ ಪಾವನವಗೊಳಿಸಿಕೊಳ್ಳುವೆನು॥ ✡

ಕನ್ನಡ ಕಾವ್ಯಾನುವಾದ: ಮಂಜುನಾಥ ಭಾಗವತ ಹೊಸ್ತೋಟ, ಸಹಾಯ: ಕೃಷ್ಣ ಹೆಗಡೆ ಮತ್ತು ರಾಮಕೃಷ್ಣ ಹೆಗಡೆ, ಭೈರುಂಬೆ